ಎಂದು ಸಿದ್ಧಲಿಂಗಯ್ಯನವರಿಗೆ ಹೇಳಿದ್ದೆ. ಈ ಕವನದಲ್ಲಿ ಬೆಟ್ಟದ ಶಕ್ತಿಯನ್ನು, ನೀರಿನ ಜೀವಜಲದ ಶಕ್ತಿಯನ್ನೂ ಕಟ್ಟಕಡೆಯ ಮನುಷ್ಯನಿಗೆ ಪ್ರಕೃತಿಯೇ ದಯಪಾಲಿಸುವುದು. ನದಿಗಳಂತಹ ಮನುಜರು ಹೋರಾಟವನ್ನು ಮುನ್ನಡೆಸುವರು. ಇತ್ತೀಚೆಗೆ ನೇಪಾಳದ 'ಝೆನ್ ಝೀ' ಯುವಕರು ಬೀದಿಯಲ್ಲಿ ಎಲ್ಲೆಂದರಲ್ಲಿ ಓಡುತ್ತ, ಘೋಷಣೆಗಳನ್ನು ಕೂಗುತ್ತ ಹೋಗುತ್ತಿರುವುದನ್ನು ನೋಡಿದಾಗ ನೆನಪಾಗಿದ್ದು ಇದೇ ಕವನ.

**'ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬಂದರು ಊರ ತುಂಬ ಹರಿದರು'**

ಪ್ರಳಯವಾಗದೆ ದಣಿ ಕೂರುವ ಪಟ್ಟದಲ್ಲಿ ಯಜಮಾನರ ಹಟ್ಟಿಯಲ್ಲಿ ನೀರಿನಂತೆ ನಿಲ್ಲಲು ಸಾಧ್ಯವೇ? ನೀರು, ನೆಲ, ಆಕಾಶ ಒಂದಾಗಲೂ ಸಾಧ್ಯವೇ? ಪ್ರಳಯವಾದಾಗ ಸಕಲ ಜೀವರಾಶಿಗಳೂ ಜಡ- ಚೇತನಗಳೂ ಸಮಾನರು.



ಬೀದಿಗಳು, ಗಲ್ಲಿಗಳು, ಬೇಲಿಯ ಮೆಳೆಗಳು ಧಣಿಗಳ ತಾವುಗಳು ಮುಳುಗುವಂತೆ 'ನನ್ನ ಜನ ನೀರಿನಂತೆ ನಿಂತರು' ಎಂದು ಕವಿ ಇಲ್ಲಿ ಹೇಳುವರು.

ಕೆರೆಕಟ್ಟೆಯ ನೀರು ಮುಟ್ಟುವುದಿರಲಿ, ಸೋಪಾನದ ಮೇಲೆ ಕೂರಲು ಅವಕಾಶ ಇಲ್ಲದ ಮಂದಿ, ಸಿಹಿನೀರ ಬಾವಿಯ ಬಳಿ ಬಂದು ಬಾಯಾರಿ ಬೊಗಸೆ ನೀರಿಗಾಗಿ ಕಾಯುವ ಮಂದಿಯನ್ನು ಕವಿ ನನ್ನ ನೆನಪಿಗೆ ತಂದರೆ ಅದು over reading ಇರಲಾರದು!. ಅಷ್ಟೇ ಅಲ್ಲ, ಈ ಸಂದರ್ಭ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಹಾಡ್ ಕೆರೆಯ ನೀರನ್ನು ಮುಟ್ಟುವ, ಮುಲ್ಕ್‌ರಾಜ್ ಆನಂದ್ ಅವರ 'ಅಸ್ಪೃಶ್ಯ' ಕಾದಂಬರಿಯಲ್ಲಿ ಕಾದಂಬರಿಯ ನಾಯಕನ ತಂಗಿ ಸೋಹಿನಿ, ಬಾವಿಯ ಬಳಿ ಒಂದು ಕೊಡ ನೀರಿಗಾಗಿ ದಯನೀಯವಾಗಿ ಕಾಯುವ ಸಂದರ್ಭ- ಎಲ್ಲಾ ನೆನಪಿಗೆ ತಂದು 'ನನ್ನ ಜನ' ನೀರೇ ನೀರಾಗಿ ಎಲ್ಲವನ್ನೂ, ಎಲ್ಲವನ್ನೂ ನೀರಿನಲ್ಲಿ ಮುಳುಗಿಸುವ ರೂಪಕ, ಬೆಚ್ಚುವಂತೆ ಮಾಡಿತು.

ಹುಲಿ- ಸಿಂಹಗಳಂತೆ ನಾದಗೈಯುತ್ತಾ, ಇರುವೆಗಳಂತೆ ದಂಡಿನಲ್ಲಿ ಸಾಗುವುದು... ಗಾಂಧಿಯವರ ದಂಡಿಯಾತ್ರೆ ಮತ್ತು ಚೀನಾದ ಲಾಂಗ್ ಮಾರ್ಚ್ ಎರಡನ್ನೂ ಕಣ್ಣ ಮುಂದೆ ತಂದು ನಿಲ್ಲಿಸುವುದು!

ಇಲ್ಲಿ 'ನನ್ನ ಜನ' ಧಿಕ್ಕಾರ ಕೂಗುವರು, ಹೆಚ್ಚೆಂದರೆ ಕುತ್ತಿಗೆಯ ಪಟ್ಟಿ ಹಿಡಿದು ದಬಾಯಿಸುವರು. 'ಇಕ್ಕಿರಿ, ಒದೆಯಿರಿ' ಎಂದು ಅಬ್ಬರಿಸಿದರೂ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗರು. ಎಲ್ಲೂ ನೆತ್ತರು ಹರಿಯದು, ಅದರ ವಾಸನೆ ಕೂಡ ಇಲ್ಲ! ಹಾಗೆ... ಸಿದ್ಧಲಿಂಗಯ್ಯ ಅವರು ಅಹಿಂಸಾವಾದಿಯೇ... ಈ ಕವನ ಹೀಗೆ ನನ್ನನ್ನು ವಿವಶಗೊಳಿಸಿದ್ದರಿಂದಲೇ ಇದು ನನ್ನ ಮೆಚ್ಚಿನ ಕವನಗಳಲ್ಲಿ ಒಂದಾಗಿದೆ.

ಒಟ್ಟಿನಲ್ಲಿ ಶಿವತಾಂಡವ ನೃತ್ಯವನ್ನು ಈ ಕವನದಲ್ಲಿ ಕಂಡಿರುವೆ. ಸಾವಿರಾರು ನದಿಗಳು ಶಿವತಾಂಡವ ನೃತ್ಯ ಮಾಡಿದರೆ ಹೇಗೋ ಹಾಗೆ.

●